ಶ್ರೀ ಧರ್ಮಸಿಂಗ್.—ಏಕೆಂದರೆ, ನಮ್ಮಲ್ಲಿ ಒಂದು ಪೋಲ್ ಫ್ಯಾಕ್ಟರಿ ಮಂಜೂರಾಗಿದ್ದು ಆ ಪರಿಯಾದಲ್ಲಿ ಹೆಚ್ಚು ಕೆಲಸ ಆಗುವ ರೀತಿಯಲ್ಲಿ ಮಾಡಿದರೆ ಆದಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶ ಆಗುತ್ತದೆ. ಅದಕ್ಕೆ ಹೆಚ್ಚಿನ ರೀತಿಯಲ್ಲಿ ಲಕ್ಷ್ಯ ಕೊಡುವೇಕೆಂದು ನನ್ನ ಅಪೇಕ್ಷೆ.

ಉಪಾಧ್ಯಕ್ಷರು.—ಪ್ರಸ್ತಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :

"೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಕ್ರಮಾಂಕ ೨೨ ಮತ್ತು ೪೭ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮಿಗಿರವ ಮೊತ್ತವನ್ನು ಮಂಜೂರು ಮಾಡಬೇಕೆಂಬ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ."

ಪ್ರಸ್ತಾವವು ಅಂಗೀಕೃತವಾಗಿದೆ.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

DEMAND No. 22—STATE EXCISE

"That a sum not exceeding Rs. 10,75,97,000 on Revenue Account be granted 'on account' to the Government to defray the charges which will come in course of payment during the financial year ending 31st day of March 1984 in respect of "State Excise."

DEMAND No. 47—POWER PROJECTS

"That a sum not exceeding Rs. 4,09,00,000 on Revenue Account and Rs. 1,66,11,99,000 on Capital Account be granted 'on account' to the Government to defray the charges which will come in course of payment during the financial year ending 31st day of March 1984 in respect of "Power Projects."

ಪ್ರಶ್ನೋತ್ತರಗಳು

(ಬಾಕ್ಕಿ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಉತ್ತರಗಳು)

ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಚಾರ್ಯರು ಮತ್ತು ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

೩೭೧ (೧೭೮) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಚಾರ್ಯರ ಮತ್ತು ಉಪನ್ಯಾಸಕರ ಕಿರಿಯ ಕಾಲೇಜುಗಳಲ್ಲಿರುವ ಹುದ್ದೆಗಳೆಷ್ಟು ?

ಅ) ಕೊಡಗು ಜಿಲ್ಲೆಯ ಸರ್ಕಾರಿ ಪ್ರೌಢ ಶಾಲೆಗಳಲ್ಲಿರುವ ಮುಖ್ಯೋಪಾಧ್ಯಾಯರು ಮತ್ತು ಪ್ರೌಢಶಾಲಾ ಶಿಕ್ಷಕರ ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ಈ ಬೋಧಿಸುವ ಶಿಕ್ಷಕರ ಕೊರತೆಯಿಂದ ವಿದ್ಯಾರ್ಥಿಗಳ ಗಲಭೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ವಿದ್ಯಾ ಸಚಿವರು).—

ಅ)

ಕಿರಿಯ ಕಾಲೇಜುಗಳು.

ಪ್ರಾಚಾರ್ಯರು	೪
ಉಪನ್ಯಾಸಕರು	೬

ಹಿರಿಯ ದರ್ಜೆ ಕಾಲೇಜುಗಳು.

ಸರ್ಕಾರಿ ಕಾಲೇಜುಗಳಲ್ಲಿ ಪ್ರಿನ್ಸಿಪಾಲರ ಹುದ್ದೆಗಳಿರುವುದಿಲ್ಲ ಹಿರಿಯ ಪ್ರೊಫೆಸರ್, ರೀಡರ್ ಅಥವಾ ಉಪನ್ಯಾಸಕರು ಕಾಲೇಜಿನ ಪ್ರಿನ್ಸಿಪಾಲರಾಗಿರುತ್ತಾರೆ.

	ಪ್ರಾಧ್ಯಾಪಕರು	೧
	ರೀಡರ್	೮
	ಉಪನ್ಯಾಸಕರು	೫೫
ಆ)	ಮುಖ್ಯೋಪಾಧ್ಯಾಯರು ...	೫೫
	ಸಹೋಪಾಧ್ಯಾಯರು ...	೩೪

ಇ) ಹೌದು.

ಈ) ಸರ್ಕಾರವು ಈ ಹುದ್ದೆಗಳನ್ನು ಬಡ್ತಿ ಅಥವಾ ನೇಮಕಾತಿಯ ಮೂಲಕ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದೆ.

ಶ್ರೀ ಎಂ.ಎಂ. ನಾಣಯ್ಯ.—ಮಾನ್ಯ ಅಧ್ಯಕ್ಷರೇ, ಈ ಹುದ್ದೆಗಳಿಗೆ ಸರ್ಕಾರ ನೇಮಕ ಮಾಡುವಾಗ ಸ್ಥಳೀಯವಾಗಿ ಅಂದರೆ ಕೊಡಗು ಜಿಲ್ಲೆ, ಅಥವಾ ಪಕ್ಕದ ಪ್ರದೇಶಗಳ ಜನರಿಗೆ ಆದ್ಯತೆಯನ್ನು ಕೊಟ್ಟು ಭರ್ತಿ ಮಾಡುತ್ತದೆಯೇ?

ಶ್ರೀ ಬಿ. ರಾಚಯ್ಯ.—ಈಗ ರೀಡರ್ಸ್ ದರ್ಜೆಯಲ್ಲಿ ಸುಮಾರು ೧೦೦ ಜನ ನೇಮಕಾತಿ ಮಾಡಬೇಕು. ಅದಕ್ಕೋಸ್ಕರ ನಾವು ಇಂದು ಪಿ.ಎಸ್.ಸಿ. ಯವರಿಗೆ ಕೇಳಿದ್ದೇವೆ. ಬಹುಶಃ ಅವರು ಸ್ಥಳೀಯರಿಗೆ ಆದ್ಯತೆಯನ್ನು ಕೊಡುವ ಹಾಗೆ ಕಾಣಲಿಲ್ಲ. ಎಲ್ಲರ ಒಂದು ಅರ್ಹತೆ ಮೇಲೆ ಮಾಡುತ್ತಾರೆ. ಹಾಗೆಯೇ ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಕ ಮಾಡತಕ್ಕಂಥ ಕಾಲದಲ್ಲಿ ಸ್ಥಳೀಯರಾಗಿ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಜೆ.ಕೆ. ಸುಬ್ಬಯ್ಯ.—ಮಾನ್ಯ ಅಧ್ಯಕ್ಷರೇ, ಪೊನ್ನಂಪೇಟೆ ಕಿರಿಯ ಕಾಲೇಜ್‌ನಲ್ಲಿ ಸರಿಯಾಗಿ ಲೆಕ್ಚರರ್ಸ್ ಇಲ್ಲವೆಂದು ವಿದ್ಯಾರ್ಥಿಗಳು ಮುಷ್ಕರ ಹೂಡಿ, ಟೌನ್‌ನಲ್ಲಿ ಮುತ್ತಿಗೆ ಹಾಕಿ ಲೂಟಿ ಮಾಡಿ ಅಲ್ಲಿ ತೊಂದರೆ ಉಂಟು ಮಾಡಿದ್ದಾರೆ. ಆದ್ದರಿಂದ ಅಲ್ಲಿಗೆ ಲೆಕ್ಚರರ್ಸ್‌ಗಳನ್ನು ಕಳುಹಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಬಿ. ರಾಚಯ್ಯ.—ಹೌದು, ಇದೆ ಸ್ವಾಮಿ.